**All India Radio: Bangalore**
**National Bulletin In Kannada**
**08.05.2025 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.05.2025 07.35 a.m.**

**<><><><>**

ಮುಖ್ಯಾಂಶಗಳು

1. ಆಪರೇಷನ್ ಸಿಂಧೂರ್ ಹಿನ್ನೆಲೆ ; ಕೇಂದ್ರ ಸರ್ಕಾರದಿಂದ ಇಂದು ಸರ್ವಪಕ್ಷಗಳ ಸಭೆ
2. ತನ್ನ ಪ್ರತಿಕ್ರಿಯಾತ್ಮಕ ಹಕ್ಕನ್ನು ವಿವೇಚನೆಯಿಂದ ಬಳಸಿದ ಭಾರತ ; ಸಚಿವ ರಾಜನಾಥ್ ಸಿಂಗ್
3. ವದಂತಿಗಳ ಬಗ್ಗೆ ಜಾಗೃತಿ ಮೂಡಿಸಬೇಕು, ಸಾರ್ವಜನಿಕರಲ್ಲಿನ ಅನಗತ್ಯ ಭಯ ಹೋಗಲಾಡಿಸಬೇಕು - ಸಚಿವ ಅಮಿತ್ ಶಾ ಕರೆ
4. ನಿಯಮಗಳ ರಚನೆಗಾಗಿ ಚೌಕಟ್ಟು ಪ್ರಕಟಿಸಿದ ಭಾರತೀಯ ರಿಸರ್ವ್ ಬ್ಯಾಂಕ್
5. ಟೆಸ್ಟ್ ಕ್ರಿಕೆಟ್‌ಗೆ ರೋಹಿತ್ ಶರ್ಮ ವಿದಾಯ ; ಏಕದಿನ ಪಂದ್ಯಾವಳಿಯಲ್ಲಿ ಮುಂದುವರಿಕೆ

<><><><>

ಆಪರೇಷನ್ ಸಿಂದೂರ್ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನವದೆಹಲಿಯಲ್ಲಿಂದು ಸರ್ವಪಕ್ಷಗಳ ಸಭೆಯನ್ನು ಕರೆದಿದೆ. ಈ ಸಭೆಯಲ್ಲಿ, ವಿವಿಧ ರಾಜಕೀಯ ಪಕ್ಷಗಳ ನಾಯಕರಿಗೆ ಸರ್ಕಾರವು ಕಾರ್ಯಾಚರಣೆಯ ಕುರಿತು ವಿವರಣೆ ನೀಡಲಿದೆ. ನಾನಾ ರಾಜಕೀಯ ಪಕ್ಷಗಳ ನಾಯಕರು ಪಕ್ಷಾತೀತವಾಗಿ ಆಪರೇಷನ್ ಸಿಂದೂರ್ ಅನ್ನು ಶ್ಲಾಘಿಸಿದ್ದಾರೆ ಮತ್ತು ಭಯೋತ್ಪಾದಕರ ವಿರುದ್ಧ ಸಶಸ್ತ್ರ ಪಡೆಗಳ ಕ್ರಮದ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದಾರೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಸರ್ಕಾರ ಕೈಗೊಂಡಿರುವ ಎಲ್ಲಾ ಕ್ರಮಗಳಿಗೆ ವಿರೋಧ ಪಕ್ಷಗಳು ಬೆಂಬಲ ನೀಡುತ್ತಿವೆ. ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಪಾಕಿಸ್ತಾನದಲ್ಲಿನ ಭಯೋತ್ಪಾದಕ ಶಿಬಿರಗಳ ಮೇಲೆ ದಾಳಿ ನಡೆಸುವ ಮೂಲಕ, ಭಾರತವು ತನ್ನ ನೆಲದ ಮೇಲೆ ದಾಳಿ ಮಾಡಿದ್ದರಿಂದ ತನ್ನ ಪ್ರತಿಕ್ರಿಯಿಸುವ ಹಕ್ಕನ್ನು ಬಳಸಿಕೊಂಡಿತು. ಆಪರೇಷನ್ ಸಿಂದೂರ್ ಭಾರತವು ಯಾವುದೇ ಭಯೋತ್ಪಾದಕ ದಾಳಿಯನ್ನು ಸಹಿಸುವುದಿಲ್ಲ ಎಂಬ ಬಲವಾದ ಸಂದೇಶವನ್ನು ಜಗತ್ತಿಗೆ ರವಾನಿಸಿದೆ ಹಾಗೂ ಈ ಕಾರ್ಯಾಚರಣೆಯು ಭಯೋತ್ಪಾದನೆಯ ವಿರುದ್ಧ ನರೇಂದ್ರ ಮೋದಿ ಸರ್ಕಾರದ ಶೂನ್ಯ-ಸಹಿಷ್ಣುತಾ ನೀತಿ ಪ್ರದರ್ಶಿಸಿದೆ. ನಿನ್ನೆ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಪ್ರಧಾನಿ ಮೋದಿ

ಅವರು ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಮತ್ತು ಭಯೋತ್ಪಾದಕ ಅಡಗುತಾಣಗಳನ್ನು ನಾಶಪಡಿಸಿದ್ದಕ್ಕಾಗಿ ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದರು. ಆಪರೇಷನ್ ಸಿಂದೂರ್ ನಡೆಸುವ ಮೂಲಕ, ಪಹಲ್ಗಾಮ್ ದಾಳಿಗೆ ಕಾರಣರಾದವರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂಬ ಬದ್ಧತೆಯನ್ನು ಭಾರತ ಪೂರೈಸಿದೆ. ಈ ಕಾರ್ಯಾಚರಣೆ ೨೫ ನಿಮಿಷಗಳ ಕಾಲ ನಡೆಯಿತು ಹಾಗೂ ಈ ಪ್ರತೀಕಾರದ ಕ್ರಮದಲ್ಲಿ ಪಾಕಿಸ್ತಾನ ಮತ್ತು ಪಿಒಕೆಯಲ್ಲಿ ಒಂಬತ್ತು ಭಯೋತ್ಪಾದಕ ತಾಣಗಳು ನಾಶವಾಗಿವೆ.

**ಧ್ವನಿ: ಸುಪರ್ಣ (೪೪ ಸೆಕೆಂಡ್‌ಗಳು)**

<><><>

ಭಾರತ ತನ್ನ ಪ್ರತಿಕ್ರಿಯಾತ್ಮಕ ಹಕ್ಕು ಚಲಾವಣೆಯಾಗಿ ಅಪರೇಷನ್ ಸಿಂಧೂರ್ ನಡೆಸಿದೆ ಹಾಗೂ ವಿಚಾರ ಪೂರ್ವಕ ಮತ್ತು ವಿವೇಚನಾಯುಕ್ತ ವಿಧಾನದಲ್ಲಿ ಕ್ರಮ ತೆಗೆದುಕೊಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಗಡಿ ರಸ್ತೆ ಸಂಘಟನೆಯ ೬೬ನೇ ಸಂಸ್ಥಾಪನಾ ದಿನದ ಸಮಾರಂಭದಲ್ಲಿ ಮಾತನಾಡಿದ ಅವರು ಸಶಸ್ತ್ರ ಪಡೆಗಳು ನಿಖರವಾಗಿ, ಮುನ್ನೆಚ್ಚರಿಕೆಯಿಂದ ಮತ್ತು ಕಾಳಜಿ ಪೂರ್ವಕವಾಗಿ ಪಾಕಿಸ್ತಾನ್ ಮತ್ತು ಪಾಕಿಸ್ತಾನ್ ಅಕ್ರಮಿತ ಕಾಶ್ಮೀರದಲ್ಲಿ ಉಗ್ರಗಾಮಿಗಳ ತರಬೇತಿ ಶಿಬಿರಗಳನ್ನು ಧ್ವಂಸಗೊಳಿಸಿ ಇತಿಹಾಸ ರಚಿಸಿವೆ. ಈ ಕಾರ್ಯಾಚರಣೆಯಲ್ಲಿ ನಾಗರಿಕ ಜನತೆಗೆ ಯಾವುದೇ ತೊಂದರೆಯಾಗದಂತೆ ಸೂಕ್ಷ್ಮ ಸಂವೇದನೆಯನ್ನು ಸಶಸ್ತ್ರ ಪಡೆ ಪ್ರದರ್ಶಿಸಿವೆ ಎಂದು ಸಚಿವ ರಾಜನಾಥ್ ಸಿಂಗ್ ಹೇಳಿದರು.

**ಧ್ವನಿ : ರಾಜನಾಥ್ ಸಿಂಗ್ (೨೯ ಸೆಕೆಂಡ್‌ಗಳು)**

ಉಗ್ರಗಾಮಿಗಳನ್ನು ಹಾಗೂ ಅವರ ಅಡಗುತಾಣಗಳನ್ನು ದಮನಗೊಳಿಸಲು ಸಿಂಧೂರ್ ಕಾರ್ಯಾಚರಣೆ ನಡೆಸಲಾಗಿದ್ದು, ಇದು ಅವರ ಶಿಬಿರ ಹಾಗೂ ಇತರ ಮೂಲಸೌಕರ್ಯಗಳನ್ನು ಧ್ವಂಸಗೊಳಿಸಲು ಮಾತ್ರ ಸೀಮಿತವಾಗಿತ್ತು ಎಂದು ಹೇಳಿದರು.

<><><>

ಸಿಂಧೂರ್ ಕಾರ್ಯಾಚರಣೆಯ ನಂತರ ಲಡಾಖ್‌ನ ಲೇಹ್ ವಿಮಾನ ನಿಲ್ದಾಣವನ್ನು ಮುಚ್ಚಿರುವ ಕಾರಣ ಅಲ್ಲಿಂದ ನಿರ್ಗಮಿಸಬೇಕಾದ ವಿಮಾನ ಸಂಚಾರ ರದ್ದಾಗಿರುವ ಸಾಮಾನ್ಯ ಪ್ರವಾಸಿಗರಿಗೆ ಆ ಪ್ರದೇಶದಲ್ಲಿ ಉಚಿತ ವಸತಿ ಸೌಕರ್ಯ ಒದಗಿಸಲಾಗುತ್ತಿದೆ. ಹೋಟೆಲ್‌ಗಳು ಅಥವಾ ಅತಿಥಿ ಗೃಹಗಳಿಂದ ಚೆಕ್ ಔಟ್ ಮಾಡಿ ಲೇಹ್‌ನಲ್ಲಿ ಸಿಲುಕಿಕೊಂಡಿರುವ ಪ್ರವಾಸಿಗರು ಆತಿಥ್ಯ ಉದ್ಯಮದಿಂದ ಈ ಸೌಲಭ್ಯವನ್ನು ಪಡೆಯಬಹುದು. ಸಿಂಧೂರ್ ಕಾರ್ಯಾಚರಣೆಯ ನಂತರ

ಲೇಹ್ ವಲಯಕ್ಕೆ ಎಲ್ಲಾ ನಿಗದಿತ ವಿಮಾನಗಳ ಕಾರ್ಯಾಚರಣೆಯನ್ನು ರದ್ದುಗೊಳಿಸಿದ್ದರಿಂದ ಸಾವಿರಾರು ಪ್ರವಾಸಿಗರು ಲಡಾಖ್‌ನಲ್ಲಿ ತೊಂದರೆಗೆ ಸಿಲುಕಿಕೊಂಡಿದ್ದಾರೆ. ಆಲ್ ಲಡಾಖ್ ಹೋಟೆಲ್ ಮತ್ತು ಅತಿಥಿ ಗೃಹ ಸಂಘ ALHAGHA ಬ್ಯಾನರ್ ಅಡಿಯಲ್ಲಿ ಲಡಾಖ್‌ನ ಆತಿಥ್ಯ ಉದ್ಯಮದ ಎಲ್ಲಾ ಪಾಲುದಾರರು ನಿನ್ನೆ ಪ್ರವಾಸಿಗರಿಗೆ ತಮ್ಮ ಬೆಂಬಲ ಮತ್ತು ಕಾಳಜಿಯನ್ನು ವ್ಯಕ್ತಪಡಿಸಲು ಒಮ್ಮತದ ನಿರ್ಧಾರವನ್ನು ಪ್ರಕಟಿಸಿದ್ದಾರೆ.

<><><><>

ಪಾಕಿಸ್ತಾನ ಮತ್ತು ನೇಪಾಳಕ್ಕೆ ಹೊಂದಿಕೊಂಡಿರುವ ಗಡಿ ರಾಜ್ಯಗಳಲ್ಲಿ ಸಾಮಾಜಿಕ ಹಾಗೂ ಇತರೆ ಮಾಧ್ಯಮ ವೇದಿಕೆಗಳಲ್ಲಿ ದೇಶ ದ್ರೋಹದ ಅಂಶಗಳನ್ನು ಪ್ರಚುರ ಪಡಿಸುವವರ ಮೇಲೆ ತೀವ್ರ ನಿಗಾ ಇರಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚಿಸಿದ್ದಾರೆ. ಅವರು, ದೆಹಲಿಯಲ್ಲಿ ನಿನ್ನೆ ಭದ್ರತೆ ಕುರಿತಂತೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಸಿದರು. ಸಭೆಯಲ್ಲಿ ಅವರು, ಕೇಂದ್ರದ ಸಂಸ್ಥೆಗಳು, ರಾಜ್ಯ ಸರ್ಕಾರಗಳು ಸಮನ್ವಯದೊಂದಿಗೆ ಒಗ್ಗೂಡಿ ಕಾರ್ಯ ನಿರ್ವಹಿಸಬೇಕೆಂದು ಸೂಚಿಸಿದರು. ಅಲ್ಲದೇ ಭದ್ರತೆಯ ದೃಷ್ಟಿಯಿಂದ ಸೂಕ್ಷ್ಮವಾದ ಪ್ರದೇಶಗಳಲ್ಲಿ ಸುರಕ್ಷತೆಯನ್ನು ಮತ್ತಷ್ಟು ಬಲವರ್ಧನೆಗೊಳಿಸಬೇಕು ಹಾಗೂ ಭದ್ರತಾ ಪಡೆಗಳ ನಡುವೆ ಅಡೆ-ತಡೆ ರಹಿತ ಸಂಪರ್ಕವನ್ನು ಸಾಧಿಸಲು ಎಲ್ಲ ಪ್ರಯತ್ನಗಳನ್ನು ಕೈಗೊಳ್ಳಬೇಕು ಎಂದು ಅವರು ನಿರ್ದೇಶನ ನೀಡಿದರು. ವದಂತಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಕ್ರಮಕೈಗೊಳ್ಳಬೇಕು ಹಾಗೂ ಸಾರ್ವಜನಿಕರಲ್ಲಿ ಯಾವುದೇ ಅನಗತ್ಯ ಭಯ ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಮಿತ್ ಶಾ ಸೂಚನೆ ನೀಡಿದ್ದಾರೆ. ಸ್ಥಳೀಯ ಆಡಳಿತ, ಸೇನೆ ಮತ್ತು ಅರೆ ಸೇನಾ ಪಡೆಗಳ ನಡುವಿನ ಸಮನ್ವಯವನ್ನು ಮತ್ತಷ್ಟು ಹೆಚ್ಚಿಸಬೇಕು ಎಂದ ಅವರು, ಈಗಾಗಲೇ ನೀಡಿರುವ ಸೂಚನೆಯಂತೆ ಎಲ್ಲ ರಾಜ್ಯಗಳು ಅಣಕು ಪ್ರದರ್ಶನಗಳನ್ನು ಪೂರ್ಣಗೊಳಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದರು. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಅಪರೇಷನ್ ಸಿಂಧೂರ್ ಅನ್ನು ಯಶಸ್ವಿಯಾಗಿ ನಡೆಸಲಾಗಿದೆ. ಅದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಲಾಗುವುದು. ಭಾರತದಲ್ಲಿ ಗಡಿ, ಸೇನೆ ಮತ್ತು ಪ್ರಜೆಗಳ ಮೇಲೆ ದಾಳಿ ನಡೆಸುವವರಿಗೆ ಭಾರತ ತಕ್ಕ ಉತ್ತರ ನೀಡಲಿದೆ ಎಂಬುದು ಈ ಕಾರ್ಯಾಚರಣೆಯಿಂದ ಸಾಬೀತಾಗಿದೆ. ಆ ಮೂಲಕ ಇಡೀ ವಿಶ್ವಕ್ಕೆ ಬಲವಾದ ಸಂದೇಶವನ್ನು ರವಾನಿಸಲಾಗಿದೆ. ಈ ಕಾರ್ಯಾಚರಣೆ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣತೆ ಹೊಂದಿರುವುದರ ಸಂಕೇತವಾಗಿದೆ ಎಂದು ಅಮಿತ್ ಶಾ ಹೇಳಿದರು.

<><><>

ನಿಯಮಗಳನ್ನು ರೂಪಿಸುವ ಪ್ರಕ್ರಿಯೆಯನ್ನು ಪ್ರಮಾಣೀಕರಿಸುವ ಉದ್ದೇಶದಿಂದ, ಭಾರತೀಯ ರಿಸರ್ವ್ ಬ್ಯಾಂಕ್, ಆರ್‌ಬಿಐ ನಿಯಮಗಳ ರಚನೆಗಾಗಿ ಚೌಕಟ್ಟನ್ನು ಪ್ರಕಟಿಸಿದೆ. ಅಧಿಕೃತ ಹೇಳಿಕೆಯಂತೆ ಈ ನಿಯಮಗಳು ರಿಸರ್ವ್ ಬ್ಯಾಂಕ್ ಹೊರಡಿಸಿದ ಎಲ್ಲಾ ನಿರ್ದೇಶನಗಳು, ಮಾರ್ಗಸೂಚಿಗಳು, ಅಧಿಸೂಚನೆಗಳು, ಆದೇಶಗಳು, ನೀತಿಗಳು, ವಿಶೇಷಣಗಳು ಮತ್ತು ಮಾನದಂಡಗಳನ್ನು ಒಳಗೊಂಡಿರುತ್ತದೆ. ಹೊಸ ಚೌಕಟ್ಟಿನ ಪ್ರಕಾರ, ಆರ್‌ಬಿಐ ಅಂತಹ ನಿಯಂತ್ರಣದ ಕರಡನ್ನು ಬ್ಯಾಂಕಿನ ಅಧಿಕೃತ ವೆಬ್‌ಸೈಟ್‌ನಲ್ಲಿ www.rbi.org.in ವಿವರ ಹೇಳಿಕೆಯೊಂದಿಗೆ ಪ್ರಕಟಿಸಬೇಕು ಮತ್ತು ಸಾರ್ವಜನಿಕ ಅಭಿಪ್ರಾಯಗಳನ್ನು ಪಡೆಯಬೇಕು. ವಿವರಗಳ ಹೇಳಿಕೆಯು ಸಾಧ್ಯವಾದಷ್ಟು ಮಟ್ಟಿಗೆ ನಿಯಂತ್ರಣದ ಪರಿಣಾಮ ವಿಶ್ಲೇಷಣೆ ಸೇರಿದಂತೆ ನಿಯಮಗಳ ಉದ್ದೇಶಗಳನ್ನು ಒಳಗೊಂಡಿರಬೇಕು.

<><><>

ಕ್ರಿಕೆಟ್ ಆಟಗಾರ ರೋಹಿತ್ ಶರ್ಮ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಈ ವಿಷಯ ತಿಳಿಸಿರುವ ಅವರು, ತಕ್ಷಣದಿಂದಲೇ ತಾವು ನಿವೃತ್ತಿಯಾಗುವುದಾಗಿ ಮಾಹಿತಿ ಹಂಚಿಕೊಂಡಿದ್ದಾರೆ. ೬೭ ಟೆಸ್ಟ್ ಕ್ರಿಕೆಟ್‌ಗಳನ್ನು ಆಡಿರುವ ಅವರು, ೧೨ ಶತಕ ೧೮ ಅರ್ಧಶತಕ ಸೇರಿದಂತೆ ಒಟ್ಟು ೪ ಸಾವಿರದ ೩೦೧ ರನ್‌ಗಳನ್ನು ಗಳಿಸಿದ್ದಾರೆ. ೩೮ ವರ್ಷ ವಯಸ್ಸಿನ ರೋಹಿತ್ ಶರ್ಮ ಒಂದು ದಿನದ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಭಾರತವನ್ನು ಪ್ರತಿನಿಧಿಸುವುದಾಗಿ ತಿಳಿಸಿದ್ದಾರೆ.

**ಧ್ವನಿ : ರೋಹಿತ್ ಶರ್ಮ (೨೮ ಸೆಕೆಂಡ್‌ಗಳು)**

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>